## 12

# ಹೊಸ ಒಡಂಬಡಿಕೆಯ ಸಭೆ

ಈ ಜಗತ್ತಿನಲ್ಲಿ ಜೀವಿಸುವದರ ಅಗತ್ಯತೆಯು, ತೀರ್ಮಾನಗಳನ್ನು ಮಾಡುವಂತೆ ನಡಿಸುತ್ತದೆ. ನಮ್ಮ ಹೆಚ್ಚಾದ ತೀರ್ಮಾನಗಳು ಚಿಕ್ಕವಾದವುಗಳೂ, ಕ್ಷಣಿಕವಾದವುಗಳೂ ಆಗಿರುತ್ತವೆ. ಇತರ ತೀರ್ಮಾನಗಳು ವಿಮರ್ಶಾತ್ಮಕವಾಗಿ ಮುಖ್ಯತ್ವವುಳ್ಳದವುಗಳಾಗಿದ್ದು, ಈ ಜೀವನದಲ್ಲಿ ದೇವರ ಮುಂದೆ ನಾವು ಜೀವಿಸುವದಕ್ಕೋಸ್ಕರ ಹಾಗೂ ನಿತ್ಯತ್ವದ ದೆಸೆಗೆ ತೀರ್ಮಾನಿಸುವಂಥದ್ದರ ಮೇಲೆ ಪರಿಣಾಮ ಮಾಡುತ್ತದೆ. ಜೀವಿತದ ಹಾಗೂ ನಿತ್ಯತ್ವದ ಮೇಲೆ ಪ್ರಭಾವ ಬೀರುವ ಈ ತೀರ್ಮಾನಗಳು ಮಾಡಲ್ಪಡುವ ಮೊದಲು ಗಂಭೀರವಾದ ಯೋಜನೆಯನ್ನೂ ಪ್ರಾರ್ಥನಾ ಪೂರ್ವಕವಾದ ಪರಿಶೋಧನೆಯನ್ನು ಮಾಡುವ ಅಗತ್ಯತೆಯಿದೆ. ಹೊಸ ಒಡಂಬಡಿಕೆಯ ಸಭೆಯನ್ನು ಪ್ರವೇಶಿಸಲು ತೀರ್ಮಾ ನಿಸುವದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ತೀರ್ಮಾನವು ಬೇರೆ ಯಾವುದೂ ಇರುವದಿಲ್ಲ, ಈ ಪ್ರಶ್ನೆಯ ಬಗ್ಗೆ ನಾವು ಮಾಡುವ ತೀರ್ಮಾನವು ದೇವರಿಗಾಗಿರುವ ನಮ್ಮ ಅನುದಿನದ ಜೀವನದ ಮೇಲೆ, ನಮ್ಮ ಆತ್ಮಿಕ ಸ್ವರೂಪದ ಮೇಲೆ, ನಮ್ಮ ಆರಾಧನೆಯ ಮೇಲೆ ಹಾಗೂ ನಮ್ಮ ಆತ್ಮಿಕ ಸೇವೆಯ ಮೇಲೆ ಪ್ರಭಾವ ಬೀರುವುದು. ಹಾಗಾದರೆ, ಈ ನಮ್ಮ ಪ್ರಶ್ನೆಯು ಬೈಬಲಿನ ಸ್ಪಷ್ಟ ಬೋಧನೆಗಳಿಗನುಗುಣವಾಗಿ ಮತ್ತು ನಮ್ಮ ದುರಭಿಪ್ರಾಯವಿಲ್ಲದ ಅತ್ಯುತ್ತಮವಾದ ತಿಳುವಳಿಕೆಗೆ ಅನುಗುಣವಾಗಿ ಉತ್ತರಿಸಲ್ಪಡುವವರೆಗೆ ಆಲೋಚನಾ ಪೂರ್ವಕವಾಗಿ ವಿಚಾರಿಸಲ್ಪಡತಕ್ಕದ್ದು.

ನಮ್ಮ ಸಮರ್ಪಣೆಗಾಗಿಯೂ ನಿಷ್ಠೆಗಾಗಿಯೂ ಬೇಡಿಕೊಳ್ಳುವ ಭಿನ್ನವಾದ ಸಭೆಗಳೊಂದಿಗೆ ನಮ್ಮ ಜಗತ್ತು ತುಂಬಿಕೊಂಡಿರುತ್ತದೆ. ಒಂದು ತೀರ್ಮಾನವು ಮಾಡಲ್ಪಡಬೇಕು. ಹೊಸ ಒಡಂಬಡಿಕೆಯ ಸಭೆಯು ಯಾವುದು? ನಾವು ಹೇಗೆ ತೀರ್ಮಾನಿಸಬಹುದು?

ಪುರಾವೆಯ ಬಗ್ಗೆ ಜಾಗರೂಕತೆಯಿಂದ ಯೋಚಿಸಲು ಮತ್ತು ಸರಿಯಾದ ಆಯ್ಕೆ ಮಾಡಲು ದೇವರಿಗೆ ಮೆಚ್ಚುವಂಥ ಆಯ್ಕೆಮಾಡಲು ನಮಗೆ ಸಹಾಯ ಮಾಡುವಂತೆ ಸಾಮಾನ್ಯ ತಿಳುವಳಿಕೆಯ ಮಾರ್ಗದರ್ಶನವನ್ನು ಸ್ಪಷ್ಟವಾಗಿ

ಅನುಸರಿಸತಕ್ಕದ್ದು. ಪ್ರಾಮಾಣಿಕತೆಯಿಂದ ಈ ಮಾರ್ಗದರ್ಶನಗಳನ್ನು ನಾವು ಅನುಸರಿಸಿದರೆ ಇಂದಿನ ಜಗತ್ತಿನಲ್ಲಿಯ ಹೊಸ ಒಡಂಬಡಿಕೆಯ ಸಭೆಯನ್ನು ನಾವು ಗುರಿತಿಸಬಹುದು.

ಈ ಮಾರ್ಗದರ್ಶನಗಳು ಯಾವುವು?

## ಪ್ರಥಮ ಶತಮಾನದಲ್ಲಿ ಸಭೆಯು ಹೇಗೆ ಗುರುತಿಸಲ್ಪಟ್ಟಿತು?

ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಸಭೆಯ ಪ್ರಥಮ ದೃಷ್ಟಿಕೋನವು ಅಪೊಸ್ತಲರ ಕೃತ್ಯಗಳ ಗ್ರಂಥದ 2ನೇ ಅಧ್ಯಾಯದ ಅನಂತರದ ಭಾಗದಲ್ಲಿ ಕಂಡುಬರುತ್ತದೆ. ಯೇಸುವಿನಿಂದ ಹಾಗೂ ಆತನ ಅಪೊಸ್ತಲರಿಂದ ಸಭೆಯನ್ನು ಕುರಿತ ಪ್ರವಾದನೆಗಳು ತಮ್ಮ ದಾಖಲೆಯ ಮೂಲಕ ಸಭೆಯ ವರ್ಣ ಚಿತ್ರಕ್ಕಾಗಿ ಸುವಾರ್ತೆಗಳು ನಮ್ಮಲ್ಲಿ ನಿರೀಕ್ಷೆಯನ್ನೂ ಪೂರ್ವಭಾವನೆಯನ್ನೂ ಹುಟ್ಟಿಸಿದವು (ಮತ್ತಾಯ 16:18; ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:4-8). ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯು ಸ್ಥಾಪಿಸಲ್ಪಟ್ಟಂತೆ ಸಭೆಯ ಸಜೀವ ವರ್ಣ ಚಿತ್ರವು ಪರಿಶುದ್ಧಾತ್ಮನಿಂದ ನಮ್ಮ ಮುಂದೆ ಇಡಲ್ಪಟ್ಟಿದೆ.

ಸಭೆಯ ಈ ವರ್ಣ ಚಿತ್ರವು ಅದರ ಪ್ರಮುಖ ಗುಣಲಕ್ಷಣಗಳನ್ನು ನೋಡಲು ನಮಗೆ ಸಹಾಯ ಮಾಡುತ್ತದೆ. ನಿಜ ಜೀವನದಲ್ಲಿ, ಯೇಸು ಸ್ಥಾಪಿಸಿದ ಸಭೆಯು ಹೇಗೆ ಕಾಣುತ್ತದೆ ಎಂದು ಆಶ್ಚರ್ಯಪಡುವದಕ್ಕೆ ನಾವು ಬಿಡಲ್ಪಟ್ಟಿಲ್ಲ.

ಅಪೊಸ್ತಲರ ಕೃತ್ಯಗಳು 2ರಲ್ಲಿ ಲೂಕನಿಂದ ಕೊಡಲ್ಪಟ್ಟ ವರ್ಣ ಚಿತ್ರದಲ್ಲಿ ಸಭೆಯ ಪ್ರಮುಖ ಲಕ್ಷಣಗಳನ್ನು ಗಮನವಿಟ್ಟು ನೋಡಿರಿ:

> ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.
>
> ಎಲ್ಲರಿಗೂ ಭಯ ಉಂಟಾಯಿತು. ಇದಲ್ಲದೆ ಅನೇಕ ಅದ್ಭುತ ಕಾರ್ಯಗಳೂ ಸೂಚಕ ಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು. ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು. ಅವರು ದಿನಾಲು ಏಕ ಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟಮಾಡುತ್ತಾ ಇದ್ದರು; ದೇವರನ್ನು

ಕೊಂಡಾಡುವ ವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆ ಹೊಂದಿದವರನ್ನು ದಿನಾಲು ಅವರೊಂದಿಗೆ ಸೇರಿ ಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 2:42-47).

ಈ ವರ್ಣ ಚಿತ್ರದಲ್ಲಿ ಸಭೆಯ ಯಾವ ಗುಣಲಕ್ಷಣಗಳನ್ನು ನಾವು ನೋಡುತ್ತೇವೆ?

**ಸಮರ್ಪಣೆಯಲ್ಲಿ ಬಲವಾಗಿದ್ದರು**

ಅಪೊಸ್ತಲರ ತತ್ವಕ್ಕೆ ಇಲ್ಲವೇ ಬೋಧನೆಗೆ ಸ್ಥಿರವಾದ ಸಮರ್ಪಣೆಯು ಮೊದಲನೆಯ ಲಕ್ಷಣವಾಗಿತ್ತು, "ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42) ಎಂದು ಲೂಕನು ಹೇಳಿದ್ದಾನೆ.

ಅಪೊಸ್ತಲರ ಬೋಧನೆಗೆ ಸಭೆಯ ಈ ಸಮರ್ಪಣೆಯು ನಂಬಿಕಸ್ತಿಕೆಯಿಂದ ಅವರ ಬೋಧನೆಯನ್ನು ಅನುಸರಿಸುವದರಲ್ಲಿ, ಆರಾಧನೆಯಲ್ಲಿ, ಸೇವೆಯಲ್ಲಿ ಹಾಗೂ ಕೊಡುವಿಕೆಯಲ್ಲಿ, ಕರ್ತನ ಭೋಜನವನ್ನು ಅವರು ಆಚರಿಸುವದರಲ್ಲಿ ಇಲ್ಲವೇ "ರೊಟ್ಟಿ ಮುರಿಯುವದರಲ್ಲಿ";[1] ಮತ್ತು ಪ್ರಾರ್ಥನೆಯಲ್ಲಿ, ಅವರ ಅನ್ಯೋನ್ಯತೆಯಲ್ಲಿ ಪ್ರಕಟವಾಗುತ್ತಿತ್ತು. ಕ್ರಿಸ್ತನು ಅವರ ಶಿರಸ್ಸಾಗಿದ್ದನು. ಅಪೊಸ್ತಲರ ಮೂಲಕ ಅವರಿಗೆ ಕೊಡಲ್ಪಟ್ಟ ಆತನ ವಾಕ್ಯವನ್ನು ಗೌರವಿಸುವಂತೆ ಆತನ ಸಭೆಯಲ್ಲಿ ಆತನ ನಾಯಕತ್ವವನ್ನು ಅವರು ಗುರುತಿಸಿಕೊಂಡಿದ್ದರು.

ಕ್ರೈಸ್ತ ಜಗತ್ತಿನಲ್ಲಿಯ ವಿಭಾಗಗಳು ಕ್ರಿಸ್ತನನ್ನು ಆತನ ಸಭೆಯಂತೆ ಅನುಸರಿಸುವ ಸರಳತೆಯನ್ನು ಗಲಿಬಿಲಿ ಮಾಡುವದಕ್ಕೆ ಬಿಡತಕ್ಕದ್ದಲ್ಲ. ಸಭೆಯು ಮಾನವ ನಿರ್ಮಿತ ಗುಂಪಾಗಿರುವದಿಲ್ಲ. ಅದು ಪರಿಶುದ್ಧಾತ್ಮನ ಸಂದೇಶಕ್ಕೆ ಸಮರ್ಪಿಸಿಕೊಂಡ ಜನರ ಗುಂಪಾಗಿದೆ ಮತ್ತು ಹೀಗೆ, ಸುವಾರ್ತೆಗೆ ತಮ್ಮ ವಿಧೇಯತೆಯಿಂದ, ಪರಿಶುದ್ಧಾತ್ಮನಿಂದ ಕ್ರಿಸ್ತನ ಸಭೆಯೊಳಗೆ ಒಂದಾಗಿ ಕೂಡಿಸಲ್ಪಟ್ಟಿದ್ದಾರೆ. ಅವರು ಕ್ರಿಸ್ತನಿಗೆ ಮಾತ್ರವೇ ಒಳಪಟ್ಟವರಾಗಿದ್ದಾರೆ. ಅವರು ಮಾನವ ನಾಯಕತ್ವದ ಕಡೆಗೆ ನೋಡುವದಿಲ್ಲ, ಆದರೆ ದೇಹಕ್ಕೆ ಶಿರಸ್ಸಾದ ಕ್ರಿಸ್ತನಿಂದ ಆತನ ಪ್ರಕಟಿತ ವಾಕ್ಯದ ಮುಖಾಂತರ ನಡಿಸಲ್ಪಡುತ್ತಾರೆ. ಕ್ರಿಸ್ತನಿಗೆ ನಂಬಿಗಸ್ತಿಕೆಯನ್ನು ಆತನ ಪ್ರೇರೇಪಿತ ವಾಕ್ಯದಲ್ಲಿ ನೆಲೆಗೊಳಿಸುವ ಮಾತುಗಳಲ್ಲಿ ದೃಷ್ಟಿಸುತ್ತಾರೆ. ಬೈಬಲು ಕ್ರೈಸ್ತರ ಆರಾಧನೆಯನ್ನು, ಅವರ ಕಾರ್ಯಗಳನ್ನು ಜಗತ್ತಿನಲ್ಲಿ ಕ್ರಿಸ್ತನ ಹಸ್ತಗಳಂತೆ, ಹಾಗೂ ಕ್ರಿಸ್ತನಿಗಾಗಿ ಅವರ ದೈನಂದಿನ ಜೀವಿತವನ್ನು ನಡಿಸಲು ಮಾರ್ಗ ದರ್ಶನ ಮಾಡುತ್ತದೆ.

ಸಭೆಯ ಪರಿಶುದ್ಧಾತ್ಮನ ವರ್ಣ ಚಿತ್ರವನ್ನು ನೋಡುವಂತೆ ನಾವು ಬಲವಾದ ಸಮರ್ಪಣೆಯ ಲಕ್ಷಣವನ್ನು ನೋಡುತ್ತೇವೆ.

**ಸ್ವಾರ್ಥರಹಿತ ಅನುಕಂಪ**

ಸಭೆಯ ಈ ದೈವಿಕ ಚಿತ್ರದಲ್ಲಿ ನಾವು ತಪ್ಪಿಸಿಕೊಳ್ಳದ ಇನ್ನೊಂದು ಗುಣಲಕ್ಷಣವು ಒಬ್ಬರಿಗೋಸ್ಕರವಾಗಿ ಒಬ್ಬರಿಗಿದ್ದ ಸ್ವಾರ್ಥರಹಿತ ಅನುಕಂಪ. ಸತ್ಯಕ್ಕೆ ಅವರ ಈ ಯಥಾರ್ಥವಾದ ವಿಧೇಯತೆಯು ಅವರಲ್ಲಿ ಒಬ್ಬರಿಗೋಸ್ಕರವಾಗಿ ಒಬ್ಬರಿಗೆ ಅನುಕಂಪದ ಪ್ರೀತಿಯನ್ನು ಹುಟ್ಟಿಸಿತು. "ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 2:45) ಎಂದು ಲೂಕನು ಹೇಳಿದ್ದಾನೆ.

ಪಂಚಾಶತ್ತಮ ದಿನವನ್ನು ಆಚರಿಸಲು ಯೆಹೂದ್ಯರು ರೋಮ್ ಸಾಮ್ರಾಜ್ಯದ ಎಲ್ಲಾ ಕಡೆಗಳಿಂದ ಬಂದಿದ್ದರು. ಈ ಪಂಚಾಶತ್ತಮವು ಒಂದು ಸಾಮಾನ್ಯವಾದದ್ದಾಗ ಬಹುದೆಂದು ಅವರು ಯೋಚಿಸಿದ್ದರು; ಆದರೆ ಅವರಿಗೆ ಸಂಪೂರ್ಣ ಆಶ್ಚರ್ಯವಾಗುವಂತೆ ಅದು ಹಾಗಾಗಲಿಲ್ಲ. ಪ್ರವಾದಿಗಳು ಮುನ್ನೋಡಿದ ಐತಿಹಾಸಿಕ ದಿನವಾಗಿತ್ತು. ಪೇತ್ರನ ಸಂದೇಶವನ್ನು ಕೇಳಿದ ನಂತರ, ಅನೇಕ ಯೆಹೂದ್ಯರು ಕ್ರೈಸ್ತರಾಗಲು ತೀರ್ಮಾನಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:41). ಕ್ರಿಸ್ತನಿಗೆ ಅವರ ವಿಧೇಯತೆಯು ಅವರಿಗೆ ಆಮೂಲಾಗ್ರ ಬದಲಾವಣೆಯಾಗಿತ್ತು, ಒಂದು ಸಂಗತಿ, ಅವರು ಯೆರೂಸಲೇಮಿನಲ್ಲಿ ಉಳಿದುಕೊಂಡು, ಈಗ ಅವರು ಭಾಗವಾಗಿದ್ದ ಸಭೆಯ ಬಗ್ಗೆ ಅಪೊಸ್ತಲರಿಂದ ಹೆಚ್ಚಾಗಿ ಬೋಧನೆ ಹೊಂದಬೇಕಾಗಿತ್ತು. ಅವರಲ್ಲಿ ಕೆಲವರಿಗೆ ಯೆರೂಸಲೇಮಿನಲ್ಲಿರಬೇಕಾದ ತಕ್ಷಣದ ನಿರ್ಧಾರವು ಕಠಿಣವಾದದ್ದಾಗಿತ್ತು. ಯಾಕಂದರೆ ಅಂಥ ಇರುವಿಕೆಗಾಗಿ ಅವರು ಮುಂದಾಗಿ ಯೋಜನೆಗಳನ್ನು ಮಾಡಿಕೊಂಡಿರಲಿಲ್ಲ. ಅವರಿಗೆ ವಸತಿಯ ಹಾಗೂ ಊಟದ ಅವಶ್ಯಕತೆಯಿತ್ತು ಎಂಬುದರಲ್ಲಿ ಸಂಶಯವಿಲ್ಲ. ಇಂಥ ಬಿಕ್ಕಟ್ಟಿನ ಪರಸ್ಥಿತಿಯನ್ನು ಎದುರಿಸದ ಕ್ರೈಸ್ತರು ದೂರದ ಪ್ರದೇಶಗಳಿಂದ ಬಂದ ಕೊರತೆಯಲ್ಲಿದ್ದ ಈ ಸಹೋದರ ಸಹೋದರಿಯರಿಗೆ ಹೇಗೆ ಪ್ರತಿಸ್ಪಂಧಿಸಿದರು? ಅವರ ಪ್ರತಿಕ್ರಿಯೆಯು ಖಚಿತವಾಗಿ ಸಮಾನವಾಗಿರುವ ಅನುಕಂಪ ಹಾಗೂ ಪ್ರೀತಿಯ ಚಿತ್ರವಾಗಿತ್ತು. ಈ ಸಹೋದರರಿಗೆ ಜೋಪಾಸನೆ ಮಾಡಲು ಕೆಲವರು ತಮ್ಮ ಮನೆಗಳನ್ನು ಭೂಮಿಯನ್ನು ಮಾರಿದರು. ಅವರ ಕೃತ್ಯಗಳು ಕ್ರಿಸ್ತನು ಯಾವಾಗಲೂ ತನ್ನ ಸಭೆಯ ಭಾಗವಾಗಿರಬೇಕೆಂದು ಉದ್ದೇಶಿಸಿದ ಅನುಕಂಪದ ಲಕ್ಷಣದ ಉದಾಹರಣೆಗಳಾಗಿದ್ದವು.

ಅವರ ಹಂಚಿಕೊಳ್ಳುವಿಕೆಯನ್ನು ವಿವರಿಸಲಾಗದಷ್ಟು ಸುಂದರವಾ

ದದನ್ನಾಗಿ ಮಾಡಿದ ಸತ್ಯವು, ದಾನಗಳು ಸಂಪೂರ್ಣವಾಗಿ ಸ್ವಯಂ ಪ್ರೇರಣೆಯಿಂದ ಕೂಡಿದವುಗಳಾಗಿದ್ದದ್ದು. ಅವರ ಕೊಡುಗೆಯು ಅಪೊಸ್ತಲರಿಂದ ಒತ್ತಾಯ ಮಾಡಲ್ಪಟ್ಟಿದ್ದಲ್ಲ. ಇಲ್ಲವೇ ಅಧಿಕಾರದಿಂದ ಕೇಳಿದ್ದಾಗಿರಲಿಲ್ಲ (ಅಪೊಸ್ತಲರ ಕೃತ್ಯಗಳು 5:4). ಮೃದುವಾದ ಕರುಣೆಯ ಹಾಗೂ ಕ್ರಿಸ್ತನಂಥ ಪ್ರೀತಿಯ ಹೃದಯಗಳಿಂದ ಅದು ಉಕ್ಕಿ ಬಂದಿತ್ತು. ಕ್ರಿಸ್ತನು ಅವರಲ್ಲಿ ನೂತನ ಸ್ವಭಾವವನ್ನೂ ಸ್ವಾರ್ಥರಹಿತ ಸಹಾನುಭೂತಿಯನ್ನೂ ಹುಟ್ಟಿಸಿದ್ದನು.

ಅವರ ಹಂಚಿಕೊಳ್ಳುವಿಕೆಯು ಎಲ್ಲರೂ ಸರಿಸಮಾನರಾಗಿರ ಬೇಕು ಇಲ್ಲವೇ ಒಂದೇ ಮೊತ್ತದ ಸಲಕರಣೆಗಳನ್ನು ಹೊಂದಿರಬೇಕು ಎಂಬ ಉದ್ದೇಶವುಳ್ಳದ್ದಾಗಿರಲಿಲ್ಲ, ಅದು ಸಮುದಾಯ ಜೀವಿಸುವಿಕೆಯಾಗಿರಲಿಲ್ಲ; ಅದು ಜೋಪಾಸನೆ ಮಾಡುವ ಪ್ರೀತಿಯಾಗಿತ್ತು. ಅವಶ್ಯಕತೆಯಲ್ಲಿರುವವರಿಗೆ ಅವರು ಕೊಟ್ಟರು. ಅವಶ್ಯಕತೆಗಳನ್ನು ತೃಪ್ತಿ ಪಡಿಸಿದರು ಆದರೆ ಆಶೆಗಳನ್ನಲ್ಲ. *ಪ್ರತಿಯೊಂದು ತುರ್ತು ಪರಿಸ್ಥಿತಿಯು ಅವಸರವನ್ನು ಕೇಳುವುದೆಂದು* ಅವರು ತಿಳಿದಿದ್ದರು. ಜನರಲ್ಲಿ ಕೊರತೆಗಳು ಬೆಳೆಯುವಾಗ, ಇತರರು ಅವುಗಳನ್ನು ನೀಗಿಸಲು ಪ್ರೀತಿಯಲ್ಲಿ ಕಾರ್ಯಮಾಡಿದರು - ಅದು ತ್ಯಾಗದ ಕೊಡುಗೆಯನ್ನು ಒಳಗೊಂಡಿತ್ತು!

ಅನಂತರದಲ್ಲಿ ಲೂಕನು ಸಭೆಯ ಬಗ್ಗೆ, "ಅವರಲ್ಲಿ ಕೊರತೆ - ಪಡುವವನು ಒಬ್ಬನೂ ಇರಲಿಲ್ಲ, ಯಾಕಂದರೆ ಹೊಲಮನೆಗಳಿದ್ದವರು ಅವುಗಳನ್ನು ಮಾರಿ ಬಂದ ಕ್ರಯವನ್ನು ತಂದು ಅಪೊಸ್ತಲರ ಪಾದಗಳ ಬಳಿಯಲ್ಲಿ ಇಡುತ್ತಿದ್ದರು; ಅದನ್ನು ಪ್ರತಿಯೊಬ್ಬನಿಗೆ ಅವನವನ ಅವಶ್ಯದಂತೆ ಹಂಚಿಕೊಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 4:34, 35) ಎಂದು ಹೇಳಿದ್ದಾನೆ. "... ಇದಲ್ಲದೆ ಒಬ್ಬನಾದರೂ ತನಗಿದ್ದ ಆಸ್ತಿಯಲ್ಲಿ ಯಾವದೊಂದನ್ನೂ ಸ್ವಂತವಾದದ್ದೆಂದು ಹೇಳಲಿಲ್ಲ, ಎಲ್ಲವೂ ಅವರಿಗೆ ಹುದುವಾಗಿ ಇತ್ತು" (ಅಪೊಸ್ತಲರ ಕೃತ್ಯಗಳು 4:32ಬ) ಎಂದೂ ಹೇಳಿದ್ದಾನೆ.

ಅನುಕಂಪವು ಕ್ರಿಸ್ತನ ಸಭೆಯ ಮೂಲ ಲಕ್ಷಣವಾಗಿದೆ. ಆತನ ವಾಕ್ಯಕ್ಕೆ ನಂಬಿಕೆಯುಳ್ಳ ವಿಧೇಯತೆಯು ಇರದಿದ್ದಲ್ಲಿ ಆತನ ಸಭೆಯು ಅಸ್ತಿತ್ವದಲ್ಲಿ ಇರಲಾರದು: ಇಲ್ಲವೇ ಅನುಕಂಪವು ಕ್ರಿಸ್ತನ ಹೃದಯದ ಪ್ರಕಟನೆಯಾಗಿ ತುಂಬಿರದಿದ್ದರೆ ಸಭೆಯು ಅಸ್ತಿತ್ವದಲ್ಲಿರಲಾರದು. ನಿಜವಾದ ಕ್ರೈಸ್ತರಲ್ಲಿ ಅವರ ಹೃದಯಗಳಲ್ಲಿ ದೇವರ ಪ್ರೀತಿಯು ವಾಸಿಸುವದರಿಂದ ಸೃಷ್ಟಿಸಲ್ಪಟ್ಟ ಕ್ರಿಯಾತ್ಮಕ ಸಹೋದರ ಪ್ರೀತಿಯು ಇರುತ್ತದೆ. "ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ?" (1 ಯೋಹಾನ 3:17) ಎಂದು ಯೋಹಾನನು ಬರೆದಿದ್ದಾನೆ.

ಪರಿಶುದ್ಧಾತ್ಮನ ಸಭೆಯ ಪ್ರಥಮ ವರ್ಣ ಚಿತ್ರದಲ್ಲಿ, ಸ್ವಾರ್ಥರಹಿತ

ಅನುಕಂಪವು ಸ್ಪಷ್ಟವಾದ ಮಹತ್ವದ ಲಕ್ಷಣವಾಗಿದೆ.

**ಕ್ರಿಸ್ತನಲ್ಲಿ ಒಂದಾಗಿರುವುದು**

ಈ ವರ್ಣ ಚಿತ್ರದಲ್ಲಿ ಕಂಡು ಬರುವ ಕ್ರಿಸ್ತನ ಸಭೆಯ ಮೂರನೆಯ ಗುಣಲಕ್ಷಣ ಅದರ ಐಕ್ಯತೆ. ಈ ಜನರು ಸುವಾರ್ತೆಗೆ ಹಾಗೂ ಅಪೊಸ್ತಲರ ಬೋಧನೆಗೆ ವಿಧೇಯತೆಯ ಮುಖಾಂತರವಾಗಿ ಪರಿಶುದ್ಧಾತ್ಮನು ಕ್ರಿಸ್ತನ ಸಭೆಯ ಸದಸ್ಯರಿಗೆ ಮನಸ್ಸಿನ ಐಕ್ಯತೆಯನ್ನು ಕೊಟ್ಟಿದ್ದನು. "ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನು ಹುದುವಾಗಿ ಅನುಭೋಗಿಸುತ್ತ ಇದ್ದರು" (ಅಪೊಸ್ತಲರ ಕೃತ್ಯಗಳು 2:44) ಎಂದು ಲೂಕನು ಹೇಳಿದ್ದಾನೆ. "ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತ ಮನೆಮನೆಗಳಲ್ಲಿ ರೊಟ್ಟಿ ಮುರಿದು ಉಲ್ಲಾಸದಿಂದಲೂ ಸರಲ ಹೃದಯದಿಂದಲೂ ಊಟ ಮಾಡುತ್ತ ಇದ್ದರು" (ಅಪೊಸ್ತಲರ ಕೃತ್ಯಗಳು 2:46) ಎಂದೂ ಮುಂದೆ ಹೇಳಿದ್ದಾನೆ.

ಯೇಸುವು ಕಟ್ಟಿದ ಸಭೆಯಲ್ಲಿ ಅಸ್ತಿತ್ವದಲ್ಲಿರುವ ಈ ಸುಂದರವಾದ ಐಕ್ಯತೆಯನ್ನು ನಾವು ನೋಡುವಾಗ, ಸಭೆಯ ಈ ಮೊದಲನೆಯ ವರ್ಣ ಚಿತ್ರದ ಮಹತ್ವವನ್ನು ನಮ್ಮಷ್ಟಕ್ಕೆ ನಾವೇ ಜ್ಞಾಪಿಸಿಕೊಳ್ಳೋಣ. ಈ ವರ್ಣ ಚಿತ್ರವು ಕ್ರಿಸ್ತನ ಭೂಲೋಕದ ಜೀವನ ಮತ್ತು ಮರಣದ ಪರಿಣಾಮವನ್ನು ನಮಗೆ ಕೊಡುತ್ತದೆ. ಯಾವ ರೀತಿಯ ಸಭೆಯನ್ನು ಕಟ್ಟಲು ಇಲ್ಲವೇ ಸೃಷ್ಟಿಸಲು ಕ್ರಿಸ್ತನು ಬಂದನು? ಒಬ್ಬರಿಗೆ ಇನ್ನೊಬ್ಬರೊಂದಿಗೆ ಅನ್ಯೋನ್ಯತೆಯಿಲ್ಲದ, ಭಿನ್ನವಾದ ಹೆಸರುಗಳನ್ನು ಧರಿಸಿಕೊಂಡ ಅನೇಕ ಗುಂಪುಗಳಾಗಿರುವ ದೊಡ್ಡ ಸಂಘಟನೆಯನ್ನೋ? ಅಥವಾ ಆತನು ಶಿರಸ್ಸಿನಂತೆ ಆಳುವ ಐಕ್ಯತೆಯುಳ್ಳ ಸಭೆಯನ್ನು ಆತನು ಸೃಷ್ಟಿಸಿದನೋ? ಅಪೊಸ್ತಲರ ಕೃತ್ಯಗಳು 2ರಲ್ಲಿ ತನ್ನ ಸಭೆಯು ಹೇಗಿರ ಬೇಕೆಂದು ಕ್ರಿಸ್ತನು ಬಯಸುವ ಮತ್ತು ಅದು ಜಗತ್ತಿನಲ್ಲಿ ಹೇಗೆ ಜೀವಿಸ ಬೇಕೆಂದು ಆತನು ಬಯಸುವ ಸ್ಪಷ್ಟವಾದ ಸ್ವರೂಪವನ್ನು ನೋಡುತ್ತೇವೆ. ಇದು ಹೊಸ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿದೆ. ಈ ವರ್ಣ ಚಿತ್ರವು ಮನಸ್ಸಿನ ಮತ್ತು ಜೀವನದ ಐಕ್ಯತೆಯು ಆ ಸಭೆಯ ಗುಣಲಕ್ಷಣವಾಗಿತ್ತೆಂದು ಸ್ಪಷ್ಟವಾಗಿ ಪ್ರಕಟಿಸುತ್ತದೆ. ಕ್ರಿಸ್ತನು ತನ್ನ ಸಭೆಗಾಗಿ ಅಪೇಕ್ಷಿಸುವಂಥದ್ದು ಇದಾಗಿರಬೇಕು. ಧಾರ್ಮಿಕ ಜಗತ್ತಿನಲ್ಲೆಲ್ಲಾ ಇರುವ ವಿಭಾಗಗಳು ಮನುಷ್ಯನು ತನ್ನ ಲೋಕದ ಜ್ಞಾನದಲ್ಲಿ, ಕ್ರಿಸ್ತನ ಸಭೆಯನ್ನು ಬಿಟ್ಟಿದ್ದಾನೆ ಮತ್ತು ತನ್ನ ಸ್ವಂತ ಸಭೆಗಳನ್ನು ಮಾಡಿಕೊಂಡಿದ್ದಾನೆ ಎಂಬುದಕ್ಕೆ ನಿಜವಾದ ಗುರುತಾಗಿದೆ.

ಕರ್ತನ ಸಭೆಯ ಐಕ್ಯತೆಯು ಮದುವೆಯಲ್ಲಿ ಉದಾಹರಿಸಲ್ಪಡಬಹುದು. ಒಬ್ಬ ಪುರುಷ ಹಾಗೂ ಒಬ್ಬ ಸ್ತ್ರೀಯು ಮದುವೆಯಲ್ಲಿ ಒಂದಾಗುತ್ತಾರೆ (ಎಫೆಸ 5:31). ಮದುವೆಯ ಶಿಷ್ಟಾಚಾರದ ನಂತರ ಅವರು ಒಂದು ಹೊಸ

ಕುಟುಂಬದವರಾಗುತ್ತಾರೆ. ಈಗ ಅವರು ಒಬ್ಬರಿಗೊಬ್ಬರು ಒಳಪಟ್ಟಿರುತ್ತಾರೆ. ಹೊಸ ಸ್ವಭಾವವನ್ನು ತೆಗೆದು ಕೊಳ್ಳುತ್ತಾರೆ. ಸ್ವಾರ್ಥದ ಧ್ಯೇಯಗಳೂ ವೈಯಕ್ತಿಕ ಚಟುವಟಿಕೆಗಳೂ ಇಲ್ಲವಾಗಿ ಹೋಗುತ್ತವೆ. ಈ ಕುಟುಂಬಗಳ ಒಳ್ಳೆಯದಕ್ಕಾಗಿ ಹೊಸ ಧ್ಯೇಯಗಳೂ ಗುರಿಗಳೂ ಜೀವನಕ್ಕೆ ಬರುತ್ತವೆ. ಒಂದೇ ದೇಹ, ಒಂದೇ ಪ್ರಾಣವಾಗಿ ಪಾಲನೆ, ಪ್ರೀತಿ ಹಾಗೂ ತಮ್ಮ ಕುಟುಂಬದ ಭವಿಷ್ಯಕ್ಕಾಗಿ ಅವರು ಐಕ್ಯತೆಯಲ್ಲಿ ವಾಸಿಸುತ್ತಾರೆ. ಅವರಿಗೆ ಈ ಐಕ್ಯತೆ ಹೇಗೆ ಕೊಡಲ್ಪಟ್ಟಿತು? ಮದುವೆಯಲ್ಲಿ ಪ್ರವೇಶಿಸಲು ಮತ್ತು ಮದುವೆಯ ಕಾನೂನನ್ನು ನೆರವೇರಿಸಲು ಪರಸ್ಪರ ಒಪ್ಪಿಕೊಂಡದ್ದರಿಂದ ಅದು ಕೊಡಲ್ಪಟ್ಟಿದೆ. ಅವರು ಈ ಐಕ್ಯತೆಯನ್ನು ಹೇಗೆ ಕಾಯ್ದುಕೊಂಡು ಹೋಗುವರು? ಒಬ್ಬರನ್ನೊಬ್ಬರು ಪ್ರೀತಿಸುವದರಿಂದ, ಒಬ್ಬರಿಗಾಗಿ ಒಬ್ಬರು ಜೋಪಾಸನೆ ಮಾಡುವದರಿಂದ, ಒಬ್ಬರನ್ನೊಬ್ಬರು ಕ್ಷಮಿಸುವದರಿಂದ, ತಮ್ಮ ವಿವಾಹದ ಪ್ರಮಾಣ ವಚನಗಳನ್ನು ಗೌರವಿಸುವದರಿಂದ ಮದುವೆಯ ಆಶೀರ್ವಾದಗಳ ಪರಿಸ್ಥಿತಿಯನ್ನು ಗೌರವಿಸುವದರಿಂದ ಅವರು ಕಾಪಾಡಿಕೊಳ್ಳುತ್ತಾರೆ.

ಇದು ಸಭೆಯ ವಿಷಯದಲ್ಲಿಯೂ ಸತ್ಯವಾಗಿರುವದಲ್ಲವೋ? ಸಭೆಯ ಐಕ್ಯತೆಯಲ್ಲಿ ನಾವು ಹೇಗೆ ಪ್ರವೇಶಿಸಬಹುದು? ವೈಯಕ್ತಿಕ ಒಪ್ಪಿಗೆಯಿಂದ, ಕ್ರಿಸ್ತನ ಸುವಾರ್ತೆಗೆ ನಮ್ಮ ಜೀವಿತವನ್ನು ಸಮರ್ಪಿಸಲು ತೀರ್ಮಾನಿಸುವದರಿಂದ ಮತ್ತು ಆತನ ದೇಹದೊಳಗೆ, ಸಭೆಯೊಳಗೆ ಪ್ರವೇಶಿಸುವದರಿಂದ, ಆ ದೇಹವನ್ನು ನಾವು ಪ್ರವೇಶಿಸುವಾಗ, ಪರಿಶುದ್ಧಾತ್ಮನಿಂದ ಕ್ರಿಸ್ತನೊಂದಿಗೆ ಹಾಗೂ ಅದರ ಪ್ರತಿಯೊಬ್ಬ ಸದಸ್ಯರೊಂದಿಗೆ ನಾವು ಐಕ್ಯತೆಯಲ್ಲಿ ಬರುತ್ತೇವೆ. ಒಂದೇ ಹೃದಯದಿಂದಲೂ ಆತ್ಮದಿಂದಲೂ ಪ್ರೀತಿಸಲು, ಸೇವೆ ಮಾಡಲು ಮತ್ತು ಆತನ ದೇಹವಾಗಿ ಜೀವಿ ಸಲು ಪ್ರಾರಂಭಿಸುತ್ತೇವೆ? ಈ ಐಕ್ಯತೆಯನ್ನು ನಾವು ಹೇಗೆ ಕಾಪಾಡಿಕೊಂಡು ಹೋಗುತ್ತೇವೆ? ಪರಸ್ಪರ ಪ್ರೀತಿಸುವದರಿಂದಲೂ, ಕ್ಷಮಿಸುವದರಿಂದಲೂ ಮತ್ತು ಆರಾಧಿಸಿ, ಸೇವೆ ಹಾಗೂ ಅನುದಿನದ ಜೀವಿತದಲ್ಲಿ ಕ್ರಿಸ್ತನ ವಾಕ್ಯವನ್ನು ಗೌರವಿಸುವದರಿಂದಲೂ ಅದನ್ನು ಗಟ್ಟಿಯಾಗಿ ಇಟ್ಟುಕೊಳ್ಳುತ್ತದೆ.

ಕ್ರಿಸ್ತನ ಸಭೆಯ ಅಲ್ಲಗಳೆಯಲಾಗದ ಗುಣಲಕ್ಷಣವು ಐಕ್ಯತೆಯಾಗಿದೆ. ಕ್ರಿಸ್ತನ ನಿಜವಾದ ಸಭೆಯು ವಿಭಜನೆಗಳು ಉಳಿದು ಕೊಂಡಿರುವಲ್ಲಿ ಅಸ್ತಿತ್ವದಲ್ಲಿರಲಾರದು. ಕ್ರಿಸ್ತನ ದೇಹದೊಳಗೆ ನಾವು ಪ್ರವೇಶಿಸುವಾಗ ಪರಿಶುದ್ಧಾತ್ಮನಿಂದ ಈ ಐಕ್ಯತೆಯು ನಮಗೆ ಕೊಡಲ್ಪಟ್ಟಿದೆ. ಹಾಗೂ ಆತನ ದೇಹವಾಗಿ ನಾವು ಜೀವಿಸುವಾಗ ನಾವು ಅದನ್ನು ಕಾಪಾಡಿಕೊಂಡು ಹೋಗುತ್ತೇವೆ. ಇಲ್ಲವೇ ಅದಕ್ಕೆ ಕೆಡುಕನ್ನುಂಟು ಮಾಡುತ್ತೇವೆ. ಕ್ರಿಸ್ತನ ದೇಹದಲ್ಲಿಯ ವಿಭಜನೆಯು ಪ್ರತಿಯೊಬ್ಬ ಕ್ರೈಸ್ತನಿಗೆ ವಿಚಾರಿಸಲ್ಪಡದ್ದಾಗ ಬೇಕು. ಪರಿಶುದ್ಧ ಬರಹದ ಪ್ರಕಾರ ಈ ಲೋಕದಲ್ಲಿ ನಾವು ಐಕ್ಯತೆಯಲ್ಲಿ ಕಂಡುಕೊಳ್ಳುವ ಒಂದು ಸ್ಥಳ ಕ್ರಿಸ್ತನ ದೇಹದಲ್ಲಿರುತ್ತದೆ.

## ಇಂದು ಸಭೆಯು ಹೇಗೆ ಗುರುತಿಸಲ್ಪಡಬೇಕು?

**ಅದರ ಪ್ರಾರಂಭವನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಗುರುತುಗಳಲ್ಲಿ ಒಂದು ಅದರ ಪ್ರಾರಂಭದ ಸಮಯವು ಆಗಿದೆ, ಹೊಸ ಒಡಂಬಡಿಕೆಯ ಸಭೆಯಿಂದ ಭಿನ್ನವಾದ ಸಮಯದಲ್ಲಿ ಪ್ರಾರಂಭವಾದ ಯಾವುದೇ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರದೇ ಇರುವಂಥದ್ದು ಸ್ಪಷ್ಟವಾಗಿದೆ.

ತನ್ನ ವೈಯಕ್ತಿಕ ಸೇವೆಯ ನಾಲ್ವರಲ್ಲಿ ಮೂರು ಭಾಗದ ಮುಖಾಂತರವಾಗಿ ಯೇಸುವು "ನಾನು ನನ್ನ ಸಭೆಯನ್ನು ಕಟ್ಟುವೆನು" (ಮತ್ತಾಯ 16:18) ಎಂದು ವಾಗ್ದಾನ ಮಾಡಿದನು. ಆತನು ತನ್ನ ಪುನರುತ್ಥಾನದ ನಂತರ ಪ್ರಥಮ ಪಂಚಾಶತ್ತಮ ಹಬ್ಬದ ದಿನದಂದು ತನ್ನ ವಾಗ್ದಾನವನ್ನು ನೆರವೇರಿಸಿದನು (ಅಪೊಸ್ತಲರ ಕೃತ್ಯಗಳು 2:41-47). ಈ ಪಂಚಾಶತ್ತಮ ದಿನದಿಂದ ಮುಂದೆ ಸಭೆಯು ಹೊಸ ಒಡಂಬಡಿಕೆಯ ಉಳಿದ ಭಾಗದಲ್ಲೆಲ್ಲಾ ಅಸ್ತಿತ್ವದಲ್ಲಿದೆಯೆಂಬಂತೆ, ಮಾತಾಡಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:11; 7:38; 8:1, 3).

"ನನ್ನ ಸಭೆಯು ಹಳೇ ಒಡಂಬಡಿಕೆಯಲ್ಲಿ ಪ್ರಾರಂಭವಾಯಿತು" ಎಂದು ಒಬ್ಬನು ಹೇಳುತ್ತಾನೆಂದು ಭಾವಿಸೋಣ. ಅವನ ಸಭೆಯು ಬಹಳ ಮುಂಚಿನದಾಗಿದೆ. ಹಳೇ ಒಡಂಬಡಿಕೆಯು ರಾಜ್ಯವು ಬರುವದನ್ನು ಮುಂತಿಳಿಸುತ್ತದೆ. ಆದರೆ ಅದರ ಸ್ಥಾಪನೆಯ ಬಗ್ಗೆ ದಾಖಲೆ ಮಾಡುವದಿಲ್ಲ. "ನನ್ನ ಸಭೆಯು ಕ್ರಿ. ಶ. ಮೂರನೆಯ ಶತಮಾನದಲ್ಲಿ ಪ್ರಾರಂಭವಾಯಿತು" ಎಂದು ಒಬ್ಬನು ಹೇಳುವದನ್ನು ಕಲ್ಪಿಸಿರಿ. ಅವನ ಸಭೆಯು ಬಹಳ ತಡವಾದದ್ದು. ಇದು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು. ಮುಂದೆ ಒಂದು ದಿನ ಸಭೆಯ ಸ್ಥಾಪನೆಯಾಗುವದನ್ನು ಮುನ್ನೋಡುತ್ತ ಹೊಸ ಒಡಂಬಡಿಕೆಯು ಮುಕ್ತಾಯಗೊಳ್ಳುವದಿಲ್ಲ. ಜಗತ್ತಿನಲ್ಲೆಲ್ಲಾ ಸಭೆಯು ಬಲವಾಗಿ ಹಬ್ಬುತ್ತಿರುವದರಿಂದ ನಡುಗಿತ್ತಿದ್ದ ರೋಮ್ ಸಾಮ್ರಾಜ್ಯದೊಂದಿಗೆ ಅದು ಮುಕ್ತಾಯಗೊಳ್ಳುತ್ತದೆ.

ಸಾಮಾನ್ಯವಾಗಿ, ಪ್ರೋಟೆಸ್ಟಂಟ ಸಭೆಗಳು ಹದಿನಾರನೆಯ ಶತಮಾನದಲ್ಲಿ, ಪುನಃ ಸ್ಥಾಪನೆಯ ಸಮಯದಲ್ಲಿ ಇಲ್ಲವೇ ಅದರ ನಂತರ ಅಸ್ತಿತ್ವಕ್ಕೆ ಬಂದವು. ಯಾವುದೇ ರೀತಿಯ ಸಭಾಪಂಗಡಗಳು ಹೊಸ ಒಡಂಬಡಿಕೆಯಲ್ಲಿ ಕಂಡು ಬರುವದಿಲ್ಲ. ಹೊಸ ಒಡಂಬಡಿಕೆಯ ಸಭೆಯು ಸ್ಥಾಪಿಸಲ್ಪಟ್ಟಿತು. ಶತಮಾನಗಳ ನಂತರ ಹೊಸ ಒಡಂಬಡಿಕೆಯ ಕ್ರಮದಿಂದ ದೂರ ಹೋಗುವುದು ಸಂಭವಿಸಿದಂತೆ ಸಭಾ ಪಂಗಡಗಳು (denominations) ರೂಪಿಸಲ್ಪಟ್ಟವು. ಹೊಸ ಒಡಂಬಡಿಕೆಯ ವರ್ಣ ಚಿತ್ರವು ಜನರು ಯಾವುದೇ ಸಭಾಪಂಗಡಗಳು ಅಸ್ತಿತ್ವಕ್ಕೆ ಬರುವ ಬಹಳ ಹಿಂದೆಯೇ ಜನರು ಕ್ರೈಸ್ತರಾಗುವುದು, ಜೀವಿಸುವುದು

ಹಾಗೂ ಕ್ರಿಸ್ತನ ದೇಹದಂತೆ ಆರಾಧಿಸುವುದು ಆಗಿದೆ.

ವಿಶಿಷ್ಟವಾದ ಸಭೆಯ ಬಗ್ಗೆ ನೀವು ಯೋಚಿಸುವಾಗ, "ಯಾವಾಗ ಅದರ ನಿಜವಾದ ಆರಂಭವಾಗಿದೆ?" ಎಂದು ಪ್ರಶ್ನಿಸಿರಿ, ನಮ್ಮ ಕರ್ತನ ಪುನರುತ್ಥಾನದ ನಂತರ ಮೊದಲ ಪಂಚಾಶತ್ತಮ ದಿನದ ಹಬ್ಬದ ನಂತರದ ಯಾವುದೇ ಇತರ ಸಮಯಕ್ಕೆ ಹಿಂದೆ ಹೋದರೆ ಅದು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು.

**ಅದರ ಗುರಿಯನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಇನ್ನೊಂದು ಗುರುತಿಸುವ ಲಕ್ಷಣವು ಅದರ ಉದ್ದೇಶ ಇಲ್ಲವೇ ಗುರಿ. ಹೊಸ ಒಡಂಬಡಿಕೆಯ ಸಭೆಯಾಗಿರುವದನ್ನು ಬಿಟ್ಟು ಈ ಲೋಕ ದಲ್ಲಿ ಹೊಸ ಒಡಂಬಡಿಕೆಯ ಸಭೆಗೆ ಬೇರೆ ಯಾವುದೇ ಗುರಿಯಿರುವದಿಲ್ಲ. ಅದಕ್ಕೆ ಸರಿಹೊಂದುವ, ಸಮಾನ್ಯ ಲಕ್ಷಣವುಳ್ಳ ಇಲ್ಲವೇ ಅದರಂತೆ ಆಗುವದನ್ನು ಹುಡುಕುವದಿಲ್ಲ. ಅದು ಅದೇ ಆಗಿರಲು ಉದ್ದೇಶಿಸುತ್ತದೆ.

"ಹೊಸ ಒಡಂಬಡಿಕೆಯ ಸಭೆಯು ಯಾವುದು?" ಎಂಬ ಪ್ರಶ್ನೆಯನ್ನು ನಾವು ಯೋಚಿಸುವಾಗ ಒಂದು ನಿಶ್ಚಿತವಾದ ಸಭೆಯ ಬಗ್ಗೆ "ಈ ಲೋಕದಲ್ಲಿ ಅದರ ಗುರಿ ಇಲ್ಲವೇ ಉದ್ದೇಶವು ಏನು?" ಎಂದು ನೀವು ಪ್ರಶ್ನಿಸಬಹುದು. ಹೊಸ ಒಡಂಬಡಿಕೆಯ ಸಭೆಯು ಲೋಕದಲ್ಲಿ ಕ್ರಿಸ್ತನ ದೇಹವಾಗಿತ್ತು. "ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ" (ರೋಮಾಪುರ 12:5) ಎಂದು ಪೌಲನು ಹೇಳಿದ್ದಾನೆ. ತನ್ನ ಸಮಾಜದಲ್ಲಿ ಕ್ರಿಸ್ತನ ದೇಹವಾಗಿರಲು ಪ್ರಯತ್ನಿಸದ ಯಾವುದೇ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರಲಾರದು.

ಒಂದು ಒಳಪಂಗಡವಾಗಿರಲು ಕ್ರಿಸ್ತನು ತನ್ನ ಶಿಷ್ಯರನ್ನು ಕರೆಯಲಿಲ್ಲ. ಜಗತ್ತಿನಲ್ಲಿ ಆತನ ದೇಹವಾಗಿರಲು ತನ್ನ ಶಿಷ್ಯರನ್ನು ಆತನು ಕರೆದನು. ಈ ದೇಹವು ಆತನ ಹೆಸರನ್ನು ಧರಿಸಿಕೊಳ್ಳಬೇಕು. ಆತನ ಹೆಸರಿನಲ್ಲಿ ಒಂದಾಗಿ ಆರಾಧಿಸಬೇಕು ಮತ್ತು ಆತನ ಮಹಿಮೆಗೋಸ್ಕರವಾಗಿ ಲೋಕದಲ್ಲಿ ಆತನ ಕೆಲಸವನ್ನು ಮಾಡಬೇಕು.

**ಅದರ ಆಚರಣೆಗಳನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಇನ್ನೊಂದು ಗುರುತು ಅದರ ಆಚರಣೆಗಳು. ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದೆ ಎಂದು ಹೇಳುವುದು ಒಂದು ಸಂಗತಿ ಆದರೆ ಆ ಸಭೆಯು ತನ್ನ ಆಚರಣೆಗಳೊಂದಿಗೆ ತನ್ನನ್ನು ಗುರುತಿಸಿ ಕೊಂಡಿರುವದನ್ನು ಪ್ರದರ್ಶಿಸುವುದು ಇನ್ನೊಂದು

ಸಂಗತಿಯು, ಯಾರಾದರೂ ತಾನು ಹೊಸ ಒಡಂಬಡಿಕೆಯ ಸಭೆಯಾಗಿದ್ದೇನೆಂದು ಹೇಳಿಕೊಳ್ಳಬಹುದು. ಆದರೆ ಆ ಹೇಳಿಕೆಯ ರುಜುವಾತು ಯಾವಾಗಲೂ ಆಚರಣೆಯಲ್ಲಿರಬೇಕು.

ಹೊಸ ಒಡಂಬಡಿಕೆಯ ಸಭೆಯ ಆಚರಣೆಗಳು ಹೊಸ ಒಡಂಬಡಿಕೆಯಲ್ಲಿ ಸುಲಭವಾಗಿ ಕಂಡುಬರುತ್ತವೆ. ಹೊಸ ಒಡಂಬಡಿಕೆಯ ಸಭೆಯು ಆರಾಧನೆಗಾಗಿ ಪ್ರತೀ ವಾರದ ಮೊದಲನೆಯ ದಿನದಂದು ಕೂಡಿಬಂದು; ಕರ್ತನ ಮರಣದ ಜ್ಞಾಪಕಾರ್ಥವಾಗಿ ರೊಟ್ಟಿ ಮುರಿಯುತ್ತಾರೆ (ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:20; ಇಬ್ರಿಯ 10:25). ಕ್ರೈಸ್ತರು ಒಟ್ಟಾಗಿ ಹಾಡುತ್ತಿದ್ದರು, ತಮ್ಮ ಹೃದಯಗಳಲ್ಲಿ ಸ್ತೋತ್ರವರ್ಪಿಸುತ್ತಿದ್ದರು ಹಾಗೂ ಒಬ್ಬರೊಬ್ಬರ ಭಕ್ತಿ ವೃದ್ಧಿ ಮಾಡುತ್ತಿದ್ದರು. ತಮ್ಮ ಆರಾಧನೆಯಲ್ಲಿ ವಾದ್ಯಗಳೊಂದಿಗಿನ ಸಂಗೀತ ಉಪಯೋಗಿಸುತ್ತಿದ್ದರೆಂದು ಹೊಸ ಒಡಂಬಡಿಕೆ ಯಾವುದೇ ಸೂಚನೆ ಕೊಡುವದಿಲ್ಲ, ಇಲ್ಲವೇ ಹಾಗೆ ಮಾಡಲು ಅದು ಆಜ್ಞಾಪಿಸಲಿಲ್ಲ (ಎಫೆಸ 5:19; ಕೊಲೊಸ್ಸೆ 3:16) ದೇವರ ಕಾರ್ಯವನ್ನು ಮುಂದುವರಿಸಲು ಮತ್ತು ಬಡವರಿಗೆ ಸಹಾಯ ಮಾಡಲು ಪ್ರತೀ ವಾರದ ಮೊದಲನೆಯ ದಿನದಂದು ತಮ್ಮ ಭೌತದ್ರವ್ಯದ ಸಮೃದ್ಧಿಯಿಂದ ಕೊಡುತ್ತಿದ್ದರು (1 ಕೋರಿಂಥ 16:1, 2). ಅವರು ಒಂದಾಗಿ ಪ್ರಾರ್ಥಿಸಿದರು ಮತ್ತು ಪ್ರೇರಿತ ಜನರಿಂದ ಪ್ರಕಟಿಸಲ್ಪಟ್ಟ ದೇವರ ಚಿತ್ತವನ್ನು ಯೋಚಿಸಿದರು (ಅಪೊಸ್ತಲರ ಕೃತ್ಯಗಳು 2:42). (ಪುಟ 258ರಿಂದ 262ವರಗೆ ನೋಡಿ.) ಆರಾಧನೆಯಲ್ಲಿ ಮೂರ್ತಿಗಳನ್ನು ಪೂಜಿಸುವ, ಕ್ಯಾಂಡಲ್ಸ ಇಲ್ಲವೇ ಧೂಪವನ್ನು ಉಪಯೋಗಿಸುವ ಆಚರಣೆಗಳು ಹೊಸ ಒಡಂಬಡಿಕೆಯ ಸಭೆಯ ಭಾಗಗಳಾಗಿರಲಿಲ್ಲ. ಹಾಗೆ ಮಾಡಲು ಅಧಿಕಾರವಿರಲಿಲ್ಲ. ಯೇಸು ಒಬ್ಬನೇ ಸಭೆಯ ಶಿರಸ್ಸು ಯೆಂದು ಆತನ ಕಡೆಗೆ ನೋಡುತ್ತಾ ಹೊಸ ಒಡಂಬಡಿಕೆಯ ಪ್ರತಿಯೊಂದು ಸಭೆಯು ಮೇಲ್ವಿಚಾರಕರಿಂದ ಇಲ್ಲವೇ ಹಿರಿಯರಿಂದ ನಡಿಸಲ್ಪಡುತ್ತದೆ (1 ತಿಮೊಥೆ 3:1-7). ಡೀಕನರು (1 ತಿಮೊಥೆ 3:8-11) ಮತ್ತು ಸುವಾರ್ತಿಕರು (2 ತಿಮೊಥೆ 4:1, 2) ಹಿರಿಯರ ಮೇಲ್ವಿಚಾರಣೆಯಲ್ಲಿ ಸೇವೆ ಮಾಡಿದರು.

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸಲು ಹೊಸ ಒಡಂಬಡಿಕೆಯ ಸಭೆಯ ವಿಶಿಷ್ಟವಾದ ಆಚರಣೆಗಳ ಪಟ್ಟಿಮಾಡಿ, ಈ ಪಟ್ಟಿಯನ್ನು ನಮ್ಮ ಸುತ್ತಲೂ ನೋಡುವ ಸಭೆಗಳೊಂದಿಗೆ ಹೋಲಿಸತಕ್ಕದ್ದು. ನಿಜವಾದ ಹೊಂದಾಣಿಕೆಯನ್ನು ಕಂಡುಕೊಳ್ಳುವಾಗ, ಹೊಸ ಒಡಂಬಡಿಕೆಯ ವಿಧಾನವನ್ನು ಅನುಸರಿಸುವ ಸಭೆಯನ್ನು ಕಂಡುಕೊಳ್ಳುವಾಗ, ಹೊಸ ಒಡಂಬಡಿಕೆಯ ಸಭೆಯನ್ನು, ಕರ್ತನ ಸಭೆಯನ್ನು ಕಂಡುಕೊಳ್ಳುತ್ತೇವೆ.

**ಅದರ ನಾಮಾಂಕಿತವನ್ನು ಯೋಚಿಸಿರಿ**

ಹೊಸ ಒಡಂಬಡಿಕೆಯ ಸಭೆಯನ್ನು ಗುರುತಿಸುವ ಇನ್ನೊಂದು ಗುರುತು ಅದರ ನಾಮಾಂಕಿತಗಳು. ಬೈಬಲಿನಲ್ಲಿ ಹೊಸ ಒಡಂಬಡಿಕೆಯ ಸಭೆಗೆ ಉಪಯೋಗಿಸಿದ ವಿವರಣಾತ್ಮಕ ಮಾತುಗಳು ಅದನ್ನು ಸಭಾಪಂಗಡಗಳಿಂದ (denominations) ಭಿನ್ನವಾಗಿಡುತ್ತದೆ.

ಹೊಸ ಒಡಂಬಡಿಕೆಯಲ್ಲಿ ಹೊಸ ಒಡಂಬಡಿಕೆಯ ಸಭೆಯು, "ಕ್ರಿಸ್ತನ ದೇಹ"ದಂತೆ (ಎಫೆಸ 4:12), "ದೇವರ ಸಭೆ"ಯಂತೆ (1 ಕೊರಿಂಥ 1:2), "ಕ್ರಿಸ್ತನ ಸಭೆ" ಯಂತೆ (ರೋಮಾಪುರ 16:16), "ಚೊಚ್ಚಲು ಮಕ್ಕಳ ಸಭೆ" ಯಂತೆ (ಇಬ್ರಿಯ 12:23), "ಪರಲೋಕ ರಾಜ್ಯದಂತೆ" (ಮತ್ತಾಯ 16:19), ಹಾಗೂ ಸರಳವಾಗಿ "ಸಭೆ"ಯಂತೆ (ಎಫೆಸ 1:22) ಉಲ್ಲೇಖಿಸಲ್ಪಟ್ಟಿದೆ. ಇವು ಹೆಸರುಗಳಿಗಿಂತ ಹೆಚ್ಚಾಗಿ ವರ್ಣನೆಗಳಾಗಿವೆ.

ಹೊಸ ಒಡಂಬಡಿಕೆಯಲ್ಲಿ ಕಂಡು ಬಾರದೆ ಇರುವ ಮಾತಿನಿಂದ ಇಲ್ಲವೇ ಹೆಸರಿನಿಂದ ತಿಳಿಯಲ್ಪಡುವ ಸಭೆಯ ಬಗ್ಗೆ ನೀವು ಯೋಚಿಸುವುದಾದರೆ ಏನಾಗುತ್ತದೆ? ಇದು ಸ್ವೀಕಾರ ಯೋಗ್ಯವಾದದ್ದಲ್ಲವೆಂದು ನಾವು ನಿಶ್ಚಿತವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲನೆಯದು, ಈ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ ಹೊಸ ಒಡಂಬಡಿಕೆಗೆ ಪರಿಚಯವಿಲ್ಲದ ಹೆಸರನ್ನು ತನಗಾಗಿ ಯಾಕೆ ಉಪಯಗಿಸಿಕೊಳ್ಳಬೇಕು? ಎರಡನೆಯದು, ಈ ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿದ್ದರೆ, ಅದು ಹೊಸ ಒಡಂಬಡಿಕೆಯ ಸಭೆ ಎಂದು ಎಲ್ಲರಿಗೂ ತೋರಿಸುವಂತೆ ಸಭೆಗಾಗಿ ಹೊಸ ಒಡಂಬಡಿಕೆಯ ಮಾತನ್ನು ಯಾಕೆ ಉಪಯೋಗಿಸಲಾರದು? ಮೂರನೆಯದಾಗಿ, ಹೊಸ ಒಡಂಬಡಿಕೆಗೆ ಪರಿಚಯವಿಲ್ಲದ ಹೆಸರುಗಳನ್ನು ಅದರ ಬಗ್ಗೆ ಯೋಚಿಸದೇ. ಉಪಯೋಗಿಸುವುದು ಹೊಸ ಒಡಂಬಡಿಕೆಯ ಸಭೆಗೆ ಸಾಧ್ಯತೆಯಿದೆ. ನಿಶ್ಚಿಯವಾಗಿಯೂ ಇದನ್ನು ಅವರ ಗಮನಕ್ಕೆ ತರುವಾಗ, ಹೊಸ ಒಡಂಬಡಿಕೆಯ ಸಭೆಯನ್ನು ಬಿಟ್ಟು ಬೇರಾವುದೋ ಆಗಿರುವದೆಂದು ಯಾರೂ ತಪ್ಪಾಗಿ ತಿಳಿಯದಂತೆ ಹೊಸ ಒಡಂಬಡಿಕೆಯ ಹೆಸರುಗಳಿಗೆ ಅವರು ಸಂತೋಷದಿಂದ ಬದಲಾಯಿಸುವರು.

ಒಂದು ಸಭೆಯು ಹೊಸ ಒಡಂಬಡಿಕೆಯ ಸಭೆಯಾಗಿರಲು ಬಯಸಿದರೆ ಹೊಸ ಒಡಂಬಿಕೆಯ ಸಭೆಯ ವೈಶಿಷ್ಠಗಳನ್ನು ಬೆಳಿಸಿಕೊಳ್ಳುವುದು ಮತ್ತು ಹೊಸ ಒಡಂಬಡಿಕೆಯ ಸಭೆಯೆಂದು ಪ್ರತಿಯೊಬ್ಬರೂ ತಿಳಿಯಬೇಕೆಂದು ಬಯಸಿದರೆ ಹೊಸ ಒಡಂಬಡಿಕೆಯ ಸಭೆಗಾಗಿ ಹೊಸ ಒಡಂಬಡಿಕೆಯಲ್ಲಿ ಕೊಡಲ್ಪಟ್ಟ ಹೆಸರುಗಳನ್ನು ಮಾತ್ರವೇ ಅನ್ವಯಿಸಿಕೊಳ್ಳತಕ್ಕದ್ದು.

# ಮುಕ್ತಾಯ

ಹೊಸ ಒಡಂಬಡಿಕೆಯ ಸಭೆಯ ಪರಿಶುದ್ಧಾತ್ಮನ ವರ್ಣ ಚಿತ್ರವು ಎಲ್ಲಾ ಸಮಯಗಳಿಗಾಗಿ ಇತರ ಧಾರ್ಮಿಕ ಸಂಘಟನೆಗಳಿಗೆ ಭಿನ್ನವಾಗಿರುವ ಮೂರು ಸ್ಪಷ್ಟವಾದ ಗುಣಲಕ್ಷಣಗಳನ್ನು ಪ್ರಕಟಿಸುವುದು. ಮೊದಲನೆಯದು, ಆತನ ಸಭೆಯು ಆತನ ವಾಕ್ಯಕ್ಕೆ ವಿಧೇಯವಾಗಿರುವುದು ಹಾಗೂ ಆತನ ಪ್ರೇರಿತ ವಾಕ್ಯದಲ್ಲಿ ದೃಢವಾಗಿ ಇರುವ ಜನರ ಗುಂಪಾಗಿದೆ. ಎರಡನೆಯದು, ಆತನ ಸಭೆಯು ಪ್ರತಿಯೊಬ್ಬ ಸದಸ್ಯರಿಗಾಗಿ ಅನುಕಂಪದಿಂದಲೂ ಪ್ರಾಪಂಚಿಕ ಚಿಂತನೆ ನಿಧಿಗಳಿಗಿಂತ ಹೆಚ್ಚು ಕೊರತೆಯುಳ್ಳ ಸದಸ್ಯರನ್ನು ವಿಚಾರಿಸುವ ಪ್ರೀತಿಯುಳ್ಳ ಜೋಪಾಸನೆಯಿಂದ ಮಹತ್ವವುಳ್ಳ ಸಭೆಯು ತುಂಬಿರುತ್ತದೆ. ಮೂರನೆಯದು, ಸುವಾರ್ತೆಯ ಮುಖಾಂತರ ಕ್ರಿಸ್ತನ ಸಭೆಯನ್ನು ಪ್ರವೇಶಿಸುವ ಪ್ರತಿಯೊಬ್ಬ ವ್ಯಕ್ತಿಯು ಕ್ರಿಸ್ತನೊಂದಿಗೂ ಇತರ ಎಲ್ಲಾ ಸದಸ್ಯರೊಂದಿಗೂ ಪರಿಶುದ್ಧಾತ್ಮನಿಂದ ಒಂದಾಗಿ ಮಾಡಲ್ಪಡುತ್ತಾರೆ. ಪ್ರೀತಿಯಿಂದಲೂ ಕ್ರಿಸ್ತನ ವಾಕ್ಯಕ್ಕೆ ಅನುದಿನದ ವಿಧೇಯತೆಯಿಂದಲೂ ಆ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುತ್ತಾರೆ. ಒಂದೇ ಹೃದಯ ಮತ್ತು ಜೀವದೊಂದಿಗೆ ಒಂದೇ ಕುಟುಂಬದಂತೆ ಸಭೆಯು ಚಿತ್ರೀಕರಿಸಲ್ಪಟ್ಟಿದೆ.

ಹಾಗಾದರೆ ನಾವು ಇಂದು ಕ್ರಿಸ್ತನ ಸಭೆಯಾಗಿರುವುದು ಹೇಗೆ? ಎರಡು ಪದಗಳು ವಿಧಾನವನ್ನು ಸೂಚಿಸುತ್ತವೆ: "ಡುಪ್ಲಿಕೇಟ್" ಹಾಗೂ "ಡೆಡಿಕೇಟ್" ("ನಕಲು ಪ್ರತಿ" ಹಾಗೂ "ಸಮರ್ಪಿಸು"). ಈ ಪಾಠದಲ್ಲಿ ಕಂಡುಬರುವ ಕ್ರಿಸ್ತನ ಅನುಯಾಯಿ ಆಗುವ ಮಾರ್ಗವನ್ನು ನಕಲು ಪ್ರತಿಮಾಡಿಕೊಳ್ಳೋಣ. ಈ ಜನರು ಪೇತ್ರನಿಂದ ಪ್ರಸಂಗಿಸಲ್ಪಡುವಾಗ ಕ್ರಿಸ್ತನ ವಾಕ್ಯವನ್ನು ಕೇಳಿದರು ಹಾಗೂ "ನಾವೇನು ಮಾಡತಕ್ಕದ್ದು?" ಎಂದು ಕೇಳಿದರು. "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿ ಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ..." (ಅಪೊಸ್ತಲರ ಕೃತ್ಯಗಳು 2:38) ಎಂದು ಪೇತ್ರನು ಅವರಿಗೆ ಹೇಳಿದನು. ವಾಕ್ಯದಿಂದ ಅವರಲ್ಲಿ ನೆಡಲ್ಪಟ್ಟ ವಿಶ್ವಾಸದ ಮುಖಾಂತರವಾಗಿ ಅವರು ಮಾನಸಾಂತರ ಪಟ್ಟರು; ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಮಾಡಿಸಿಕೊಂಡರು. ಕರ್ತನು ತನ್ನ ಸಭೆಗೆ ಅವರನ್ನು ಸೇರಿಸಿದನು. ಇದು ಜನರನ್ನು ತನ್ನವರನ್ನಾಗಿ ಮಾಡಿಕೊಳ್ಳುವ ಕ್ರಿಸ್ತನ ವಿಧಾನವಾಗಿದೆ. ಯಾವನಾದರೂ ಇಂದು ಈ ಮಾರ್ಗವನ್ನು ಅನುಸರಿಸಿದರೆ, ಅವರಿಗೆ ಮಾಡಿದ್ದನ್ನು ಕ್ರಿಸ್ತನು ಅವನಿಗೂ ಮಾಡುವನು. ಅವರನ್ನು ಆತನು ಪ್ರೀತಿಸಿದಂತೆ ನಮ್ಮಲ್ಲಿ ಪ್ರತಿಯೊಬ್ಬರನ್ನೂ ಆತನು ಪ್ರೀತಿಸುವನು; ಅವರಿಗಾಗಿ ಆತನು ಮರಣ ಹೊಂದಿದಂತೆಯೇ ಆತನು ನಮಗಾಗಿಯೂ ಸಹ ಮರಣ ಹೊಂದಿದನು.

ಕ್ರಿಸ್ತನ ವಾಕ್ಯಕ್ಕೆ ವಿಧೇಯರಾಗೋಣ ಮತ್ತು ಆತನ ಸಭೆಯಂತೆ ಜೀವಿಸಲಿಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳೋಣ ಅಪೊಸ್ತಲರ ಕೃತ್ಯಗಳು 2ರಲ್ಲಿ ವರ್ಣಿಸಿದಂತೆ, ಕ್ರಿಸ್ತನ ವಾಕ್ಯವನ್ನು ಹಿಡಿದು ಕೊಳ್ಳುವದರಿಂದ, ಕ್ರಿಸ್ತನ ಹೃದಯದೊಂದಿಗೆ ಜೀವಿಸುವದರಿಂದ ಮತ್ತು ಕ್ರಿಸ್ತನಲ್ಲಿ ತನ್ನ ಸಭೆಗೆ ಕೊಟ್ಟ ಪರಿಶುದ್ಧಾತ್ಮನ ಐಕ್ಯತೆಯನ್ನು ಕಾಪಾಡುವದರಿಂದ ಇದು ಮಾಡಲ್ಪಡಬೇಕು.

ಕ್ರಿಸ್ತನ ಸಭೆಯು ಹೇಗೆ ಕಾಣುತ್ತದೆಯೆಂದು ಈಗ ನೀವು ತಿಳಿದಿರುವದರಿಂದ, ಕ್ರಿಸ್ತನ ಸಭೆಯಾಗಲು ನಾವು ತೀರ್ಮಾನ ಮಾಡೋಣ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ... ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42) ಎಂಬ ಮಾತುಗಳ ಅರ್ಥವನ್ನು ಚರ್ಚಿಸಿರಿ. ಇಂದು ಈ ಮಾತುಗಳ ಅರ್ಥ ನಮಗೇನು ಆಗುತ್ತದೆ?
2. ಯೆರೂಸಲೇಮಿನ ಸಭೆಗಿದ್ದ ಐಕ್ಯತೆಯ ವಿಧಾನವನ್ನು ವಿವರಿಸಿರಿ.
3. ಕ್ರಿಸ್ತನ ಸಭೆಯು ಇಂದು ಹೇಗೆ ಕಾಣಬೇಕು?
4. ಹೊಸ ಒಡಂಬಡಿಕೆಯ ಸಭೆಯು ಯಾವುದಾಗಿದೆಯೆಂದು ತೀರ್ಮಾನಿಸುವುದು ದೀರ್ಘ ಪರಿಣಾಮದ ತೀರ್ಮಾನವಾಗಿರುವದು ಹೇಗೆ?
5. ಹೊಸ ಒಡಂಬಡಿಕೆಯ ಸಭೆಯು ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದಂದು ಪ್ರಾರಂಭವಾಯಿತೆಂದು ತೋರಿಸುವ ಬೈಬಲ್ ವಚನಗಳ ಪಟ್ಟಿ ಮಾಡಿರಿ.
6. ಸಭಾಪಂಗಡಗಳು (denominations) ಯಾವಾಗ ಉದಯವಾದವು?
7. ಕ್ರಿಸ್ತನ ದೇಹವನ್ನು ರಚಿಸುವವರು ಯಾರು - ವೈಯಕ್ತಿಕ ಕ್ರೈಸ್ತರೋ ಇಲ್ಲವೇ ಸಭಾಪಂಗಡಗಳಾಗಿರುವ (denominational) ಸಭೆಗಳೋ? (1 ಕೊರಿಂಥ 12:24 ನೋಡಿರಿ).
8. ಹೊಸ ಒಡಂಬಡಿಕೆಯಲ್ಲಿಯ ಸಭೆಯು ಅಂಕಿತ ನಾಮ ಹೊಂದಿಕೊಂಡ ರೀತಿಯಲ್ಲಿ ಸಭೆಯು ಯಾಕೆ ತನ್ನ ಅಂಕಿತ ನಾಮವನ್ನು ಹೊಂದಿಕೊಳ್ಳಬೇಕು?
9. ಇಂದಿನ ಸಭೆಗಳು ಹೊಸ ಒಡಂಬಡಿಕೆಯ ಸಭೆಯ ಆಚರಣೆಗಳನ್ನು ಅನುಸರಿಸ ಬೇಕೋ?

## ಪದ ಸಹಾಯಗಳು

ಆತನಲ್ಲಿ ನೆಲೆಗೊಳ್ಳುವುದು - ಪ್ರೀತಿಸುವುದು, ಅಧ್ಯಯನ ಮಾಡುವುದು ಹಾಗೂ ಯೇಸುವಿನ ಬೋಧನೆಗಳಿಗೆ ವಿಧೇಯರಾಗುವುದು (ಯೋಹಾನ 8:30-32).

ರೊಟ್ಟಿ ಮುರಿಯುವುದು - ಕರ್ತನ ಭೋಜನ ಸ್ವೀಕರಿಸುವುದು (ಅಪೊಸ್ತಲರ ಕೃತ್ಯಗಳು 2:42; 20:7 ನೋಡಿರಿ).

ಪರಿಚಾರಕರು - ಸಭೆಯಲ್ಲಿ ಸೇವೆಮಾಡಲು ಆರಿಸಿಕೊಂಡ ಅರ್ಹತೆಯುಳ್ಳ ಪುರುಷರು (1 ತಿಮೊಥೆ 3:8-13). ಅವರು ಹಿರಿಯರ ಕೈಕೆಳಗೆ ಸೇವೆ ಮಾಡುವರು (ಫಿಲಿಪ್ಪಿ 1:1; ಅಪೊಸ್ತಲರ ಕೃತ್ಯಗಳು 20:28).

ಹಿರಿಯರು - ಪ್ರೌಢಾವಸ್ಥೆಗೇರಿದ ಕ್ರೈಸ್ತ ಪುರುಷರು ಸ್ಥಳಿಕ ಸಭೆಗಳ ಮೇಲೆ ಮೇಲ್ವಿಚಾರಣೆ ಮಾಡಲು ಆಯ್ಕೆ ಮಾಡಲ್ಪಟ್ಟರು (1 ತಿಮೊಥೆ 3:1-7).

ವಾದ್ಯ ಸಂಗೀತ - ಗಾಳಿ, ತಂತಿ, ಹಿತ್ತಾಳೆಗಳಿಂಥವುಗಳಿಂದ ಮನುಷ್ಯರು ಮಾಡಿದ ಉಪಕರಣದೊಂದಿಗೆ, ಈ ಬೋರ್ಡ್‌ಗಳೊಂದಿಗೆ ಇಲ್ಲವೇ ಡ್ರಮ್ಸಗಳೊಂದಿಗೆ ಹಾಡುಗಳು ಹಾಡಲ್ಪಡುತ್ತವೆ. ಅಂಥ ವಾದ್ಯ ಸಂಗೀತವು ಸಭೆಯ ಆರಾಧನೆಗೆ ಸಂಬಂಧಿಸಿ ಹೊಸ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿಲ್ಲ. ಹಾಡುವಿಕೆಯು ನಮ್ಮ ಬಹಿರಂಗ ಆರಾಧನೆಯ ಭಾಗವಾಗಿರಬೇಕೆಂದು ದೇವರು ಬಯಸುತ್ತಾನೆ (ಇಬ್ರಿಯ 2:12ಬಿ; ಎಫೆಸ 5:19; ಕೊಲೊಸ್ಸೆ 3:16). ವ್ಯಕ್ತಿಗತ ಧ್ಯಾನಗಳಲ್ಲಿ ಹಾಡುವಿಕೆಯು ಯಾಕೋಬ 5:13ರಲ್ಲಿ ಪ್ರೋತ್ಸಾಹಿಸಲ್ಪಟ್ಟಿದೆ.

ಪ್ರೊಟೆಸ್ಟಂಟ್ - ಪ್ರೊಟೆಸ್ಟಂಟ್ ರಿಫೊರ್ಮೇಶನ್‌ದ ತತ್ವಗಳ ಮೇಲೆ ಅವಲಂಭಿಸಿದ ವಿಶ್ವಾಸ ಮತ್ತು ಆಚರಣೆಗಳಿರುವ ಮಾನವ ನಿರ್ಮಿತ ಧಾರ್ಮಿಕ ಗುಂಪುಗಳಿಗೆ ಈ ಹೆಸರನ್ನು ಕೊಡಲ್ಪಟ್ಟಿದೆ. ಈ ಚಳುವಳಿಯ ನಾಯಕರು ಕೆಲವು ಕಥೋಲಿಕ ಆಚರಣೆಗಳ (ಪೋಪ ಮತ್ತು ಪ್ರೀಸ್ಟರ ಅಧಿಕಾರವನ್ನು ಗುರುತಿಸುವಂಥ) ವಿರುದ್ಧ “ವಿರೋಧಿಸಿದರು.” ಈ ಚಳುವಳಿಯು ಕೆಲವು ತತ್ವಗಳನ್ನು ತಿರಸ್ಕರಿಸಿದೆ. ಹೊಸ ಒಡಂಬಡಿಕೆಯ ಸಭೆಯು ದೇವರ ವಾಕ್ಯದ ಮೇಲೆ ಅವಲಂಭಿಸಿರತಕ್ಕದ್ದು. ಇತರರು ಬೋಧಿಸಿದ್ದಕ್ಕೆ ಪ್ರತಿಕ್ರಿಯೆಯ ಮೇಲೆ ಅಲ್ಲ.

---

ಟಿಪ್ಪಣಿ

[1]ಕರ್ತನ ಭೋಜನವು ಎಷ್ಟು ಸಲ ಆಚರಿಸಲ್ಪಡುತ್ತಿತ್ತೆಂದು ಲೂಕನಿಂದ ಈ ವಾಕ್ಯ ಭಾಗದಲ್ಲಿ ಚರ್ಚಿಸಲ್ಪಟ್ಟಿಲ್ಲ. ಆದರೆ ಯೇಸು ಪುನರುತ್ಥಾನವಾದ ದಿನ ಅಂದರೆ ವಾರದ ಪ್ರತೀ ಮೊದಲನೆಯ ದಿನ ಸಭೆಯು ಭೋಜನದಲ್ಲಿ ಭಾಗವಹಿಸಿತೆಂದು ಅಪೊಸ್ತಲರ ಕೃತ್ಯಗಳು 20:7ರಲ್ಲಿ ಅವನು ಸೂಚಿಸಿದ್ದಾನೆ.